**ದಿನಾಂಕಃ 17-03-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಪಾಟೀ ಸವಾಲುಃ 1(ಎ) ರಿಂದ 1(ಎಫ್) ನೇ ಎದುರುದಾರರ ಪರ ಶ್ರೀ ಎನ್.ಪಿ.ಎಂ ವಕೀಲರಿಂದಃ**

ನಾನು ಶಾಲೆಗೆ ಹೋಗಿರುವುದಿಲ್ಲ . ಈ ಅರ್ಜಿಯನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ವಿಷಯಗಳನ್ನು ಬರೆಯಲಾಗಿದೆ ಎನ್ನುವ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ .

ದಿಃ 05-12-2010 ರಂದು ಮೃತ ಬಸಪ್ಪ ನನ್ನ ಗಂಡ ಖರೀದಿ ಮಾಡಿಕೊಂಡು ಟಾಟಾ ಏಸ್ ವಾಹನದಲ್ಲಿ ಮರಳಿ ಬರುತ್ತಿದ್ದರು ಎಂದು ನಾನು ಅರ್ಜಿಯಲ್ಲಿ ನಮೂದಿಸಿರುವುದಿಲ್ಲ . ಟಾಟಾ ಏಸ್ ವಾಹನ ಸಂಖ್ಯೆ ಕೆಎ.27/ ಎ-5793 ರಲ್ಲಿ ಮೃತ ಬಸಪ್ಪ ನನ್ನ ಗಂಡ ಪ್ರಯಾಣಿಸುತ್ತಿದ್ದ ಸಮಯದಲ್ಲಿ ಹುಲ್ಲತ್ತಿ ಕ್ರಾಸ್ ಬಳಿ ಸದರಿ ಅಪಘಾತ ಆಗಿರುತ್ತದೆ . ದಿಃ 05-11-2010 ರಂದು ಸದರಿ ಅಪಘಾತ ಆಗಿರುತ್ತದೆ ಎಂದು ನಾನು ಅರ್ಜಿಯಲ್ಲಿ ನಮೂದಿಸಿದ್ದೇನೆ ಆದರೆ ಸದರಿ

ಅರ್ಜಿಯನ್ನು 2019 ನೇ ಇಸವಿಯಲ್ಲಿ ಏಕೆ ಸಲ್ಲಿಸಲಾಗಿದೆ ಎನ್ನುವ ಕಾರಣವನ್ನು ನನಗೆ ಹೇಳಲು ಬರುವುದಿಲ್ಲ . ಈ ಅರ್ಜಿಯಲ್ಲಿ ಸದರಿ ಟಾಟಾ ಏಸ್ ವಾಹನದ ಚಾಲಕ ಮತ್ತು ಮಾಲೀಕನನ್ನು ನಾವು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿ.

ಮೃತ ಬಸಪ್ಪ ರವರ ಶವವನ್ನು ತರಲು ಮತ್ತು ಶವ-ಸಂಸ್ಕಾರಕ್ಕೊಸ್ಕರ 50 ಸಾವಿರ ರೂಪಾಯಿ ಹಣವನ್ನು ನಾವು ಖರ್ಚು ಮಾಡಿದ್ದೇವೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಟಾಟಾ ಏಸ್ ವಾಹನ ಗೂಡ್ಸ ವಾಹನವಾಗಿತ್ತು ಸದರಿ ಗೂಡ್ಸ ವಾಹನದಲ್ಲಿ ಮೃತ ಬಸಪ್ಪ ಅನಧೀಕೃತ ಪ್ರಯಾಣಿಕರೆಂದು ಪ್ರಯಾಣಿಸುತ್ತಿದ್ದರು ಎನ್ನುವುದು ನನಗೆ ಗೊತ್ತಿಲ್ಲ .

ಮೃತ ಬಸಪ್ಪ ಹಾಲು ಮತ್ತು ಮೊಸರು ಮಾರಿಕೊಂಡು ಬಂದು ನಂತರ ವ್ಯವಸಾಯದ ಕೆಲಸ ಮಾಡುತ್ತಿದ್ದರು ಅದರಿಂದ ಅವರಿಗೆ ಪ್ರತಿ ತಿಂಗಳು 20 ಸಾವಿರ ರೂಪಾಯಿ ಆದಾಯ ಇತ್ತು . ಹಾಲು ಮತ್ತು ಮೊಸರನ್ನು ಮಾರಾಟ ಮಾಡಿ ಪ್ರತಿ ತಿಂಗಳು 20 ಸಾವಿರ ರೂಪಾಯಿ ಆದಾಯ ಗಳಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಮೃತ ಬಸಪ್ಪ ಪ್ರತಿ

ದಿನ 20 ಲೀಟರ ಹಾಲು ಮತ್ತು 20 ಲೀಟರ ಮೊಸರು ಮಾರಾಟ ಮಾಡುತ್ತಿದ್ದರು. ಸದರಿ ಹಾಲು ಮತ್ತು ಮೊಸರನ್ನು ನಮ್ಮ ಊರಿನ ಜನರ ಬಳಿಯಿಂದ ನನ್ನ ಗಂಡ ಪಡೆದು ಕೊಂಡು ಮಾರಾಟ ಮಾಡುತ್ತಿದ್ದರು ನಮ್ಮ ಸ್ವಂತ ಹೈನುಗಾರಿಗೆ ಇರುವುದಿಲ್ಲ . 1 ನೇ ಎದುರುದಾರನ ಬಳಿಯಿಂದ ಹಣ ಪಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ನಾನು ನ್ಯಾಯಾಲಯಕ್ಕೆ ಈ ಸುಳ್ಳು ಅರ್ಜಿಯನ್ನು ಮತ್ತು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾವು ಪೋಲಿಸರೊಂದಿಗೆ ಶಾಮೀಲಾಗಿಕೊಂಡು ಉದ್ದೇಶ ಪೂರ್ವಕವಾಗಿ ಸದರಿ ಟಾಟಾ ಏಸ್ ವಾಹನದ ಮಾಲೀಕ ಮತ್ತು ಚಾಲಕನ ವಿರುದ್ಧ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಎಂದರೆ ಸರಿ.

ಪ್ರತಿ ತಿಂಗಳು ಮೃತ ಬಸಪ್ಪ ರವರಿಗೆ 20 ಸಾವಿರ ರೂಪಾಯಿ ಆದಾಯ ಇತ್ತು ಎನ್ನುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. 1 ನೇ ಎದುರುದಾರನ ಯಾವುದೇ ತಪ್ಪು ಇಲ್ಲದೇ ಇದ್ದರೂ ಸಹ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿ

ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ ವಕೀಲರಿಂದಃ**

ಈ ಅರ್ಜಿಯನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿದ್ದೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಈ ಅರ್ಜಿ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ವಿಷಯಗಳನ್ನು ಬರೆಯಲಾಗಿದೆ ಎನ್ನುವ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಮತ್ತು ಸದರಿ ಮಾಹಿತಿ ಸತ್ಯವಾಗಿ ಇರುತ್ತದೆ .

ನಾವು ಸಲ್ಲಿಸಿರುವ ಅರ್ಜಿ ಹಾಗು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯೂ ಸಹ ಸದರಿ ಅಪಘಾತ ದಿಃ 05-12-2010 ರಂದು ಆಗಿರುತ್ತದೆ ಎಂದು ನಮೂದಿಸಿದ್ದೇನೆ ಎಂದರೆ ಸರಿ. ಸದರಿ 1 ನೇ ಎದುರುದಾರನ ಮಾಲೀಕತ್ವದ ವಾಹನಕ್ಕೆ ದಿಃ 11-11-2009 ರಿದದಿ ದಿಃ 13-11-2010 ರವರೆಗೆ ವಿಮೆ ಇತ್ತು ಎಂದು ಅರ್ಜಿಯ ಶಿರ್ಷಿಕೆಯಲ್ಲಿ ನಮೂದಿಸಿದ್ದೇವೆ ಆದರೆ ದಿಃ 05-12-2010 ರಂದು ಅಪಘಾತವಾದ

ದಿನದಂದು ಸದರಿ ವಾಹನದ ವಿಮೆ ಚಾಲ್ತಿಯಲ್ಲಿ ಇತ್ತೋ ಅಥವಾ ಇಲ್ಲ ಎನ್ನುವುದನ್ನು ನಾವು ನಮೂದಿಸಿರುವುದಿಲ್ಲ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಯಾವುದೇ ಉತ್ತರವನ್ನು ನೀಡದೇ ಸುಮ್ಮನೆ ನಿಂತಿರುತ್ತಾಳೆ . ನಿ.ಪಿ-3 ರ ಅಂತಿಮ ವರದಿಯ ಪ್ರಕಾರ ರಾಣೆಬೆನ್ನೂರ ಗ್ರಾಮಾಂತರ ಪೊಲೀಸ ಠಾಣೆಯವರು ಸದರಿ ಟ್ರಾಕ್ಟರ ಮತ್ತು ಟ್ರೇಲರ್ ಗೆ ಯಾವುದೇ ವಿಮೆ ಇರಲಿಲ್ಲ ಎಂದು ಹೇಳಿ ಕಲಂ.146 ಸಹ ವಾಚಕ ಕಲಂ.196 ಎಂ.ವಿ.ಆಕ್ಟ ನ್ನು ಅಂತಿಮ ವರದಿಯಲ್ಲಿ ಉಲ್ಲೇಖಿಸಿದ್ದಾರೆ ಮತ್ತು ಸದರಿ ದಾಖಲೆ ನಿಜವಾಗಿರುತ್ತದೆ ಎಂದು ಹೇಳಿ ನಾವು ನ್ಯಾಯಾಯಕ್ಕೆ ಹಾಜರು ಪಡಿಸಿದ್ದೇವೆ ಎಂದರೆ ಸರಿ. ಸದರಿ ಅಪಘಾತದ ಸಮಯದಲ್ಲಿ ಸದರಿ ಟ್ರಾಕ್ಟರ ಮತ್ತು ಟ್ರೇಲರ್ ಗೆ ಯಾವುದೇ ವಿಮೆ ಇರಲಿಲ್ಲ ಮತ್ತು ಅದು ರಸ್ತೆಯಲ್ಲಿ ಹೋಗುತ್ತಿತ್ತು ಎನ್ನುವುದು ನನಗೆ ಗೊತ್ತಿಲ್ಲ. ಇದೇ ನ್ಯಾಯಾಲಯದ ಎಂ.ವಿ.ಸಿ.ನಂ.313/2011 ಮತ್ತು ಎಂ.ವಿ.ಸಿ.ನಂ.314/2011 ರಲ್ಲಿ ದಿಃ 19-03-2015 ರಂದು 2 ನೇ ಎದುರುದಾರನ ವಿರುದ್ಧ ಸಲ್ಲಿಸಿದ್ದ ಅರ್ಜಿಗಳು ಸದರಿ ಅಪಘಾತ ಪಡಿಸಿದ ವಾಹನಕ್ಕೆ ವಿಮೆ ಇರಲಿಲ್ಲ ಎನ್ನುವ ಕಾರಣಕ್ಕಾಗಿ

ವಜಾಗೊಂಡಿರುತ್ತವೆ ಎಂದರೆ ಸರಿ. ಸದರಿ ಎಲ್ಲಾ ವಿಷಯಗಳು ನನಗೆ ಗೊತ್ತಿದ್ದರೂ ಸಹ ದುರುದ್ದೇಶದಿಂದ ಈ ಅರ್ಜಿಯನ್ನು 2019 ನೇ ಇಸವಿಯಲ್ಲಿ 2 ನೇ ಎದುರುದಾರನ ವಿರುದ್ಧ ಸಲ್ಲಿಸಿ ಇಲ್ಲಿಯವರೆಗೆ 2 ನೇ ಎದುರುದಾರರಿಗೆ ನಾವು ತೊಂದರೆಯನ್ನು ನೀಡಿದ್ದೇವೆ ಎನ್ನುವ ಕಾರಣಕ್ಕಾಗಿ ಖರ್ಚು ಸಮೇತ ನಮ್ಮ ಅರ್ಜಿಯನ್ನು ವಜಾಗೊಳಿಸಲು ಅರ್ಹವಾಗಿರುತ್ತದೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.